

International Journal of Kannada Research
www.kannadajournal.com

**ISSN: 2454–5813**
IJKR 2019; 5(3): 96-99
© 2019 IJKR
www.kannadajournal.com
Received: 13-05-2019
Accepted: 15-06-2019

**ಹೇಮಂತ್ ಕುಮಾರ್ ಎಸ್**
ಸಂಶೋಧನಾ ವಿದ್ಯಾರ್ಥಿ,
ಜೈನ್ ವಿಶ್ವವಿದ್ಯಾಲಯ,
ಬೆಂಗಳೂರು

**Correspondence**
**ಹೇಮಂತ್ ಕುಮಾರ್ ಎಸ್**
ಸಂಶೋಧನಾ ವಿದ್ಯಾರ್ಥಿ,
ಜೈನ್ ವಿಶ್ವವಿದ್ಯಾಲಯ,
ಬೆಂಗಳೂರು

# ನಾ. ಕಸ್ತೂರಿಯವರ “:ಗಾಳಿಗೋಪುರ” ಕಾದಂಬರಿಯಲ್ಲಿ ಹಾಸ್ಯ

**ಹೇಮಂತ್ ಕುಮಾರ್ ಎಸ್**

**ಗಾಳಿಗೋಪುರ (1940)**

ನಾ.ಕಸ್ತೂರಿಯವರು 1935ರಲ್ಲಿ ಕುವೆಂಪು ಅವರ ಒತ್ತಾಯದ ಮೇರೆಗೆ ಲೂಯಿ ಕರೋಲ್ ಬರೆದ ‘ಅಲೈಸ್ ಇನ್ ವಂಡರ್‌ಲ್ಯಾಂಡ್’ ಶಿಶು ಕಾದಂಬರಿಯನ್ನು ಕನ್ನಡಕ್ಕೆ ‘ಪಾತಾಳದಲ್ಲಿ ಪಾಪಚ್ಚಿ’ ಎಂಬ ಕಾದಂಬರಿಯ ಹೆಸರಿನಲ್ಲಿ, ಕನ್ನಡ ಜಾಯಮಾನಕ್ಕೆ ಒಗ್ಗುವ ರೀತಿಯಲ್ಲಿ, ರೂಪಾಂತರ ಮಾಡಿದ್ದಾರೆ. ಆದರೆ ಗಾಳಿಗೋಪುರ ಕಾದಂಬರಿಯೇ ಕಸ್ತೂರಿಯವರ ಮೊದಲ ಸ್ವತಂತ್ರ ಕಾದಂಬರಿಯಾಗಿದೆ.

1940ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯವರು ಈ ಕಾದಂಬರಿಯನ್ನು ಪ್ರಕಟಿಸಿದರು, ಎರಡನೆಯ ಮುದ್ರಣ 2013ರಲ್ಲಿ ಸಪ್ನ ಬುಕ್ ಹೌಸ್‌ನಿಂದ ಪ್ರಕಟಣೆ ಆಯಿತು. ಪ್ರಥಮ ಮುದ್ರಣದಲ್ಲಿ ಕಾದಂಬರಿಯ ಮುಖಪುಟ ಚಿತ್ರಿಸಿದವರು ಖ್ಯಾತ ಕತೆಗಾರರು ಹಾಗೂ ಚಿತ್ರಕಾರ ಆನಂದರು, ಮುನ್ನುಡಿಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದ.ರಾ.ಬೇಂದ್ರೆಯವರು ಬರೆದಿದ್ದಾರೆ. ಗಾಳಿಗೋಪುರ ಕಾದಂಬರಿ ಹಾಸ್ಯ ಕಾದಂಬರಿಯಾದರೂ ಸಾಮಾಜಿಕ ಕಾದಂಬರಿಯಾಗಿದೆ. ಇದನ್ನು ಕಸ್ತೂರಿಯವರು ಸಹ ಹೇಳಿಕೊಂಡಿದ್ದಾರೆ.

ಗಾಳಿಗೋಪುರ ವಿಚಿತ್ರ ಕಲ್ಪನೆಯ ಕಥೆ ಅಸ್ತಂಗತದ ಅಂಚಿಗೆ ಹೋದರೂ ಹಾಸ್ಯದಲ್ಲಿ ಒಂದು ಸುಸಂಗತ ಸಂದೇಶವಿದೆ. ಭಾಷೆ ತಿಳಿಯಾಗಿದ್ದು ಓದುಗರನ್ನು ಸೆರೆ ಹಿಡಿದು ಎಳೆದುಕೊಂಡು ಹೋಗುತ್ತದೆ. ಗಾಳಿಗೋಪುರ ಕಾದಂಬರಿಯು ಸಾಮಾಜಿಕ ಆಯಾಮಗಳನ್ನು ಒಳಗೊಂಡಿದ್ದರೂ ಹಾಸ್ಯದ ವಿವಿಧ ಆಯಾಮಗಳನ್ನು ಒಳಗೊಂಡಿದ್ದು. ಇದು ಕೇವಲ ಸಮಾಜದ ಓರೆ, ಕೋರೆಗಳನ್ನು ಅಹಂಕಾರ, ವ್ಯಕ್ತಿಯ ವ್ಯಕ್ತಿತ್ವದ ಕುಂದು ಕೊರತೆಗಳನ್ನು, ಮಾನಸಿಕವಾಗಿ ತಳಮಳ, ಜಿಗುಪ್ಸೆ, ಆಶಾಗೋಪುರ, ಭವಿಷ್ಯದ ಕನಸುಗಳನ್ನು ನೆನೆಸುತ್ತಾ ಜೀವಿಸುವುದು ಕಾಣುತ್ತದೆ. ಇದರಲ್ಲಿ ಬರುವ ವ್ಯಕ್ತಿಗಳು ಸನ್ನಿವೇಶಗಳೂ ಕೇವಲ ‘ಗಾಳಿ’ ಎಂದು ಲೇಖಕರೇ ಹೇಳಿದ್ದಾರೆ. ಈ ವ್ಯಕ್ತಿ ನಾನಿರಬಹುದೇ ಆ ಸನ್ನಿವೇಶ ಅಲ್ಲಿ ನಡೆದದ್ದಲ್ಲವೇ ಎಂದು ಚಿಂತಿಸಬೇಕಿಲ್ಲ. ಗಾಳಿಗೋಪುರಕ್ಕೆ ಬುಡವಿಲ್ಲ. ಹಾಗೂ ಲೇಖಕರು ವಿಮರ್ಶಕರ ಟೀಕೆ ಅಥವಾ ಮೆಚ್ಚುಗೆಯನ್ನು ಗಮನದಲ್ಲಿಟ್ಟುಕೊಂಡಿಲ್ಲ. ಹಾಸ್ಯ ಪ್ರಕಾರ ಗಾಳಿಗೋಪುರ ಕಟ್ಟಿದ್ದಾರೆ. ಅದು ಯದ್ವಾತದ್ವಾ ಬರೆದಂತಿದ್ದರೂ ಎಲ್ಲಿಯೂ ಅದು ಓದುಗನಲ್ಲಿ ಡೀಪ್ ಆಗಬೇಕೆಂಬ ಒತ್ತಡಕ್ಕೆ ಲೇಖಕರು ಸಿಕ್ಕಿಲ್ಲ, ಓದಿ ನಗುವುದಷ್ಟೇ ಕೆಲಸ. ಬೇಂದ್ರೆಯವರು ಹೇಳುವಂತೆ “ವಾಚ್ಯಾರ್ಥ–ಜಡವಾದರೂ ಅವರ ಹಾಸ್ಯ ಕೃತಿಯು ವ್ಯಂಗ್ಯಾರ್ಥದಿಂದ ಸಮೃದ್ಧವಾಗಿದೆ.” ಕಸ್ತೂರಿಯವರ ಹಾಸ್ಯ ಕೃತಿಮಚತ್ಕಾರವಲ್ಲ ಸಹಜದೃಷ್ಟಿಯ ಸ್ವಭಾವ ಅಭಾಸವೇ ಅಭ್ಯಾಸವಾದ ಸಮಾಜಕ್ಕೆ ಹಾಸ್ಯವೇ ತಕ್ಕ ಮದ್ದು ಎಂದು ಹೇಳಬಹುದು.

“ಕಸ್ತೂರಿಯವರ ಹಾಸ್ಯ ಶೈಲಿಯು ತನ್ನದೇ ಆದ ಒಂದು ರೀತಿಯನ್ನು ಅನುಸರಿಸಿ ಬಂದಿದೆ. ಅಂದಿನ ಸಮಕಾಲೀನರಾದ, ಹಾಸ್ಯ ಸಾಹಿತಿಗಳಾದ ಕೈಲಾಸಂ, ಕಾರಂತ, ಜಾಗಿರದಾರ, ಗೋರೂರು, ರಾಜರತ್ನಂ, ರಮಾನಂದ, ರಾ.ಶಿ., ಇವರ ಶೈಲಿ ಹಾಗೂ ಕಸ್ತೂರಿಯವರ ಶೈಲಿಗೆ ಬಹಳ ವ್ಯತ್ಯಾಸ ಇದೆ. ಸಮಾಜವೋ ಮುಟ್ಟಿದರೆ ಮುರುಕುವಂತಹದು ಅತ್ತ ವ್ಯಕ್ತಿ–ಟೀಕೆಯಾಗಬಾರದು. ಇತ್ತ ಸಾಮಾನ್ಯತೆಗಿಳಿಯಬಾರದು ಎಂದರೆ ತ್ರಿಶಂಕು ಸ್ಥಿತಿಯಲ್ಲಿಯೇ ಸ್ವರ್ಗ ಕಟ್ಟುವುದು ಬಲು ಕಷ್ಟದ ಕೆಲಸ. ಈ ವಿನೋದ ಪ್ರಪಂಚದಲ್ಲಿ ಕಸ್ತೂರಿಯವರ ಹಾಸ್ಯ ಶೈಲಿಯು ತನ್ನದೆ ಆದ ಒಂದು ರೀತಿಯನ್ನು ಅನುಸರಿಸಿ ಬಂದಿದೆ. ಕಂಡಿದದ್ದನ್ನೆಲ್ಲ ಬಣ್ಣಿಸುವುದನ್ನಾಗಲಿ ಬಂದದ್ದನ್ನೆಲ್ಲ ಒಕ್ಕಣಿಸುವುದನ್ನಾಗಲಿ ಅವರು ಮಾಡಿಲ್ಲ. ಕೃತಿಯ ಸಹಜ ನಿಗ್ರಹವು ಇಲ್ಲಿ ಕಂಡು ಬರುತ್ತದೆ.”

ಈ ಕಾದಂಬರಿಯಲ್ಲಿ 15 ಅಧ್ಯಾಯಗಳಿವೆ. ಪ್ರತಿಯೊಂದಕ್ಕೂ ಹಾಸ್ಯದ ವಕ್ರಶಿರೋನಾಮೆ ಇಟ್ಟಿದ್ದಾರೆ. 1)

ಅಣ್ಣ ಕಣ್ಣು ಬೇನೆ, 2) ಮೃತ್ಯುವಿನ ಮಹದಾನಂದ, 3) ಗೋಳಪ್ಪನ ಬೋಳು ಬಿರುದು, 4) ಆನಂದರಾಯರ ಆಲೋಚನೆ, 5) ಗುಂಡನ ಗುಪ್ತೋಪದೇಶ, 6) ವಿಚಿತ್ರದುರ್ಗದ ವಿಶೇಷ ದಿನ, 7) ಕಾಕಾಸುರನ ಕುತಂತ್ರ, 8) ಪೂರ್ಣಬೋಧರಾಯರ ಪೇಪರು, 9) ಅಳಿಯಂದಿರ ಆಗಮನ, 10) ಅವಳಿ ಜವಳಿಯ ಜಗಳ, 11) ಗೌಡರ ಮೌಢ್ಯ, 12) ಹನುಮಂತನ ಹಾರಾಟ, 13) "ಹಳೆಯ ಗಂಟಲ ನಾದವೇ ಗತಿ", 14) ಶುಭಸ್ಯ ಶೀಘ್ರಂ, 15) ಹಿರಿಯ ಮಗನ ಕಾಗದ ಹಾಗೂ ಪ್ರತಿ ಅಧ್ಯಾಯದ ಮೊದಲಲ್ಲಿ ಆ ಅಧ್ಯಾಯಕ್ಕೆ ಸಂಬಂಧಿಸಿದಂತೆ ಕವಿಗಳ ಸೂಕ್ತಿಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಮೊದಲ ಅಧ್ಯಾಯ ಅಣ್ಣನ ಕಣ್ಣುಬೇನೆಯಲ್ಲಿ ರಾಜರತ್ನಂ ಅವರ ಪದ

"ನನಗೇನ್ಬೇಡ ನಿನ್ಬುದ್ವಾದ
ನಂಗು ನಿಂಗೂ ಬಾಳ ಬೇದ

–ರತ್ನ

ಅಣ್ಣ ತಮ್ಮಂದಿರು ತಾವಣ್ಣತಮ್ಮದಿರೆಂದು
ತಿಳಿಯಲಾರರು ನಡೆಯಲಾರರು"

–ಶ್ರೀನಿವಾಸ

ಹೀಗೆ ಆಯಾಯ ಅಧ್ಯಾಯಕ್ಕೆ ಸಂಬಂಧಿಸಿದಂತೆ ಹದಿನೈದು ಅಧ್ಯಾಯದಲ್ಲಿ ನೀಡಿದ್ದಾರೆ. ಮೊದಲ ಅಧ್ಯಾಯದಲ್ಲಿ ಅಣ್ಣ ಹನುಮಂತ ತಮ್ಮ ಶೀನ ನಡುವಿನ ಸಮರವಾಗಿದೆ. ಕತೆ ಸಾಮಾನ್ಯವಾಗಿದೆ ಆದರೆ ಪ್ರತಿ ವಾಕ್ಯದಲ್ಲಿಯೂ ಹಾಸ್ಯ ಚಿಮ್ಮುತ್ತದೆ.

ಹಾಸ್ಯೋದ್ದೀಪಕವಾದ ಶಬ್ಧ ವೈಪರೀತ್ಯ, ವಾಕ್ಯ ವೈಪರೀತ್ಯ, ಅರ್ಥವೈಪರೀತ್ಯಗಳು, ಹಾಸ್ಯದ ಮೂರು ಗುಣಗಳೂ ಇಲ್ಲಿವೆ. ಕತೆ ಶೀನ ಹಾಗೂ ಹನುಮಂತ ಅಣ್ಣತಮ್ಮಂದಿರು ಆದರೆ ಶೀನ ಎಲ್ಲದರಲ್ಲೂ ಮೊದಲು ಐದು ಬೆಳ್ಳಿ ಕಪ್ಪುಗಳನ್ನು ಗೆದ್ದು ಬೀಗುತ್ತಿದ್ದ. ಅಣ್ಣ ಹನುಮಂತ ಹಲವಾರು ವರ್ಷಗಳು ಬಿ.ಎ.ಯಲ್ಲಿ ಫೇಲಾಗಿದ್ದ ಹನುಮಂತನನ್ನು ಎಲ್ಲರೂ ಕೈಲಾಗದವರು ಅನ್ನುತ್ತಿದ್ದರು. ಅದರಲ್ಲಿಯೂ ತಮ್ಮ ಅಣ್ಣನನ್ನು ಮೀರಿಸಿ ಬೆಳೆದಾಗ, ಹನುಮಂತನಿಗೆ ಮಾನಸಿಕವಾಗಿ ಅಹಂಕಾರಕ್ಕೆ ಪೆಟ್ಟು ಬೀಳುತ್ತಿರುವುದು, ಅವನ ವ್ಯಗ್ರತೆಗೆ ಕಾರಣವಾಗಿರುತ್ತದೆ. ಅವನಿಗೆ ಎಲ್ಲರೂ ಉಪದೇಶ ಕೊಡುತ್ತಿರುತ್ತಾರೆ. ಇದು ಸಹ ಅವನಿಗೆ ಸರಿಬೀಳುವುದಿಲ್ಲ. ಇಬ್ಬರ ಜಗಳ ಕೊನೆಗೆ ಬೇರೆ ಬೇರೆ ಹಾಸ್ಟೆಲ್‌ಗಳಿಗೆ ಹೋಗಬೇಕಾಗುತ್ತದೆ. ಆಗ ಹನುಮಂತ ಮತ್ತೊಬ್ಬನ ಗೆಳೆಯನೊಂದಿಗೆ ಸಂಗ ಮಾಡಿ ಕತ್ತೆಯಂತೆ ಕಿರುಚುವುದು ಮಿಮಿಕ್ರಿ ಮಾಡುವುದನ್ನು ಕಲಿತಿರುತ್ತಾನೆ. ಅದೇ ಹನುಮಂತನ ಜೀವನದ ಅನ್ನಕ್ಕೆ ದಾರಿಯಾಗುತ್ತದೆ. ಮುಂದೆ ಹನುಮಂತ ಸರ್ಕಸ್‌ನಲ್ಲಿ ಕರಡಿವೇಷ ಹಾಕಿ ಕತ್ತೆಯಂತೆ ಕಿರುಚುವುದು ಬಹಳ ವಿಶೇಷವಾಗಿ ಕಂಡು ಬರುತ್ತದೆ. ಜನರು ಕರಡಿ ಹೇಗೆ ಕತ್ತೆಯಂತೆ ಕಿರುಚುತ್ತದೆ ಎಂದು ನೋಡಲು ಮುಗಿಬೀಳುತ್ತಿರುತ್ತಾರೆ.

ಆಕಸ್ಮಿಕವಾಗಿ ಉದಾರ ಶಿರೋಮಣಿ ಎಂಬ ಬಿರುದು ಪಡೆದಿದ್ದ ವಿ.ಆನಂದರಾಯರು ಆ ಹೆಸರು ಉಳಿಸಲು ಮನೆ ಮಠ ಮಾರಿ ದಾನ ಮಾಡಿ ಕೊನೆಗೆ ಆ ಬಿರುದಿನಿಂದ ಎಲ್ಲವನ್ನು ಕಳೆದುಕೊಳ್ಳಬೇಕಾಯಿತು. ಕೊನೆಗೆ ಪಾಪರ್ ಆಗಿ ತಮ್ಮ ಮಕ್ಕಳಾದ ಹನುಮಂತ ಮತ್ತು ಶೀನನ ಹಾಸ್ಟೆಲ್ ಫೀಸು ಕಟ್ಟಲು ಸಹ ಏನು ಇರುವುದಿಲ್ಲ. ಕೊನೆಗೆ ಮಗ ಶೀನನ ಬಹುಮಾನದ ಬೆಳ್ಳಿ ಕಪ್ಪುಗಳನ್ನು ಮೈಸೂರಿನಲ್ಲಿ ಮಾರಿ ಆನಂದರಾಯರು ಊರಿಗೆ ಹೋಗಲು ಖರ್ಚಿಗೆ ಮಾಡಿಕೊಳ್ಳುತ್ತಾರೆ.

ಆನಂದರಾಯರ ಚಿಕ್ಕ ಮಗ ಶೀನ ಆದರ್ಶ ಬಾಲಕನಾಗಿ ಕಂಡು ಬಂದರೂ ಹನುಮಂತ ವಿದ್ಯಾಭ್ಯಾಸದಲ್ಲಿ ಹಿಂದೆ ಇದ್ದರೂ ತನಗೆ ಆಗಿದ್ದ ನೋವನ್ನು ಮರೆಯಲು ಲವಲವಿಕೆಯ ವ್ಯಕ್ತಿಯಾಗಿ ಹೊರಬರುತ್ತಾನೆ. ಹನುಮಂತನಿಗೆ ಬರುಬರುತ್ತಾ ಜೀವನಾನುಭವದಿಂದ ಪಾಠ ಕಲಿಯುತ್ತಾನೆ. ಕೆಲಸಕ್ಕೆ ಸೇರುತ್ತಾನೆ. ಮೇಜರ್ ಭೀಮರಾಯರ ಮಗಳಿಗೆ ಮನೆ ಪಾಠ ಹೇಳಿಕೊಟ್ಟು ಮುಂದೆ ಮದುವೆಯಾಗಬೇಕಾಗುತ್ತದೆ. ಆದರೆ ಮದುವೆಯ ನಂತರ ತಾಳಿಕಟ್ಟಿ ಊರು ಬಿಟ್ಟು ಓಡಿಹೋಗಿ ಬೆಂಗಳೂರಿಗೆ ಬಂದು ಎಲ್ಲಿಯೂ ಕೆಲಸ ಸಿಗದೆ ಸರ್ಕಸ್ ಕಂಪನಿ ಸೇರುತ್ತಾನೆ. ಕತ್ತೆಯಂತೆ ಕೂಗುವುದೇ ಬಂಡವಾಳ ಮಾಡಿಕೊಂಡಿದ್ದ ಹನುಮಂತ ಮುಂದೆ ತಾನು ತಾಳಿ ಕಟ್ಟಿದ್ದ ಕೊಕ್ಕರೆ ಮೂಗಿನ ಲಲಿತಾಳನ್ನು ಚಿಕ್ಕ ಮಗ ಶೀನನಿಗೆ ಮದುವೆ ಮಾಡಲಾಗುತ್ತದೆ.

ಆದರೆ ಶೀನನಿಗೆ ತಂದೆ ಬೆಳ್ಳಿ ಕಪ್ಪುಗಳನ್ನು ಮಾರಿದ್ದರಿಂದ ಮನೋರೋಗಿಯಾಗಿ ಬಿಡುತ್ತಾನೆ. ಸಿಗ್ಮಂಡ್ ಫ್ರಾಯ್ಡ್‌ನ ಮನೋ ವೈಜ್ಞಾನಿಕ ವಿಮರ್ಶೆಯ ಪ್ರಕಾರ ನೋಡುವುದಾದರೆ ಶೀನ ಒಬ್ಬ ಮನೋರೋಗಿಯಾಗಿ ಕಂಡು ಬರುತ್ತಾನೆ. ಹಗಲುಗನಸು ಕಾಣುತ್ತಾನೆ. ನಿಜ ಜೀವನದಲ್ಲಿ ತಮಗೆ ದೊರಕದ ತೃಪ್ತಿಯನ್ನು ತನ್ನ ಭ್ರಮಲೋಕದಲ್ಲಿ ಪಡೆಯುತ್ತಾರೆ. ಮನೋರೋಗಿ ಶೀನನ ಬೆಳ್ಳಿ ಕಪ್ಪಿನ ಭ್ರಮಾತ್ಮಕ ಕಲ್ಪನೆಗಳು ವೈಯಕ್ತಿಕ ನೆಲೆಯಲ್ಲಿಯೇ ಉಳಿದಿವೆ. ಆ ಕಪ್ಪುಗಳು ಮತ್ತೆ ಸಿಕ್ಕಾಗ ಮನೋರೋಗ ಕಡಿಮೆಯಾಗುತ್ತದೆ.

ಇಲ್ಲಿ ಶೀನ ಎಲ್ಲದರಲ್ಲಿಯೂ ಬುದ್ಧಿವಂತ ಆದರೆ ಆತನ ವಿದ್ಯೆ ಎಲ್ಲವೂ ಕ್ಷಣಿಕ. ಬಹುಮಾನಗಳಿಗಾಗಿ ಕೊರಗುವುದನ್ನು ನೋಡಿದರೆ ಶೀನನ ಮನೋ ಧೈರ್ಯ ತುಂಬಾ ಕಡಿಮೆ ಯಾವ ಪುಸ್ತಕದ ವಿದ್ಯೆ ಅವನಿಗೆ ಸಹಾಯ ಮಾಡುವುದಿಲ್ಲ. ಆದರೆ ಹನುಮಂತ ಜೀವನ ಕೊನೆಯಲ್ಲಿ ಕರಡಿ ವೇಷ ಹಾಗೆ ಕತ್ತೆಯಂತೆ ಕಿರುಚುವ ಪಾತ್ರದಿಂದ ಹಣವೇನೋ ಸಂಪಾದನೆ ಮಾಡುತ್ತಾನೆ. ಆದರೆ ಮಾನಸಿಕ ನೋವು ತಿನ್ನುತ್ತಾನೆ. ಬದುಕಿನ ನೆಲೆ ಕಂಡುಕೊಳ್ಳಲು ಅಸ್ಥಿತ್ವ ಉಳಿಸಿಕೊಳ್ಳಲು ಮುಖವಾಡದೊಳಗೆ ಹುದುಗಿ ಯಾರು ನೋಡುವುದಿಲ್ಲ ಎಂದುಕೊಂಡರು ವಿಧಿಯೇ ಚಾಟಿ ಹಿಡಿದು ಈ ಜೀವನವನ್ನು ಎತ್ತೆತ್ತಲೋ ಸುತ್ತಿಸಿ ಆಡಿಸುವ ಚಿತ್ರ ನಗೆಯ ನೆರಳಿನಲ್ಲಿಯೇ ಚಿಂತಿಸುವಂತೆ ಪ್ರೇರೇಪಿಸುತ್ತದೆ.

ಶೀನ ಮಾನಸಿಕ ಗೀಳು ಅಥವಾ ತನಗಾದ ಅಬಸೆಷನ್‌ನಿಂದಾಗಿ ಮದುವೆ ಮನೆಯಲ್ಲಿ ಕಪ್ಪು ಕದಿಯುವುದು ನಂತರ ಅದು ಅವನಿಗೆ ನಾನು ತಂದಿದ್ದೇನೆ ಎಂದು ಗೊತ್ತಾಗುವುದಿಲ್ಲ. ಇದು ನಗಿಸುವ ಬದಲು ಕಣ್ಣು ತೇವವಾಗಿಸುತ್ತದೆ. ಪ್ರತಿ ವ್ಯಕ್ತಿ ಪ್ರತಿಕ್ಷಣ ಭವಿಷ್ಯದ ಗಾಳಿಗೋಪುರದಲ್ಲಿ ಬದುಕುತ್ತಿರುತ್ತಾರೆ. ಶೀನ ಎಂ.ಎ. ಮಾಡಿ ಮುಂದೆ ಉನ್ನತ ವಿದ್ಯಾಭ್ಯಾಸದ ಕನಸು ಕಾಣುತ್ತಾನೆ. ಆದರೆ ಅವನು ಮನೋರೋಗಿಯಾಗಿ ಅವನ ಭವಿಷ್ಯದ ಕನಸು ಮುಕ್ತಾಯವಾಗುತ್ತದೆ. ಪ್ರಾರಂಭದಲ್ಲಿ ಶೀನನ ಪಾತ್ರ ಆದರ್ಶ ವ್ಯಕ್ತಿಯಂತೆ ಚಿತ್ರಿತವಾಗಿದ್ದರು. ದಡ್ಡನಾದ ಹನುಮಂತನ ಪಾತ್ರ ಜೀವನಾನುಭವ ಜೀವನ ಯಾತ್ರೆಯ ದರ್ಶನ ಮಾಡಿಸುತ್ತದೆ. ಶೀನನ ಪಾತ್ರ ಮುಖ್ಯ ಪಾತ್ರವಾಗದೆ ಹನುಮಂತನು ನಾಯಕನ ಪಾತ್ರ ಎನಿಸಿಕೊಳ್ಳುತ್ತಾನೆ. ಪುಸ್ತಕ ಜ್ಞಾನಕ್ಕಿಂತ ಪ್ರಾಪಂಚಿಕ ಜ್ಞಾನ ಬಹಳ ಮುಖ್ಯ ಎನ್ನುವುದು ಹನುಮಂತನಿಂದ ತಿಳಿಯುತ್ತದೆ.

ಕಸ್ತೂರಿಯವರು ಹೊಸ ಗಾದೆ, ಹೊಸ ಪದಗಳ ವಾಕ್ಯಗಳ ಹಾಸ್ಯದಿಂದ ತುಂಬಿರುತ್ತವೆ. ಉದಾಹರಣೆಗೆ

1. ಕೋಪ ಕೆರೆ ತುಂಬಿ ಕೋಡಿ ಹರಿಯಿತು
2. ಬಲ್ಲುದೇ ಹೊತ್ತ ಕತ್ತುರಿಯ ಪರಿಮಳ.
3. ವೈಯಾಕರಣವನ್ನು ಹೂತಿದ್ದು.
4. ನಾವು ಹೆತ್ತ ಕೃತಿಗಳನ್ನು ಕಟುಕರು ಕೊಂದು ಹಾಕುತ್ತಾರೆ.
5. ಎರಡನೆಯ ಕೀರ್ತನೆಯಾದ 'ತಾಳಬೇಕು' ಎಂಬುದನ್ನು ಪ್ರಾರಂಭಿಸಿದಾಗ ಯಾರು 'ತಾಳ'ಲಿಲ್ಲ.

6. ಮಗ ಬಾಳೆಹಣ್ಣಿನಿಂದ, ಅಪ್ಪ ಸಿಪ್ಪೆಯಿಂದ ಜಾರಿ ಬಿದ್ದ.
7. ಕ್ಷಾಮ ದೇವತೆಯ ವಾಹನದಂತಿದ್ದ ಒಂದು ಪ್ರಾಣಿಯನ್ನು ಗಾಡಿಗೆ ಬಿಗಿದಿದ್ದರು.

ಕೆಲವು ಶಬ್ಧಗಳ ಸೃಷ್ಟಿಯನ್ನು ಉದಾಹರಣೆಗೆ ನೋಡಿದರೆ.

1. ಉದಾರ ಶಿರೋಮಣಿ
2. ಗೋಳಪ್ಪ
3. ಕೆನ್ನೀರು
4. ಹವ್ಯಾಸಂಗ
5. ವರ್ಷೇ ವರ್ಷೇ
6. ಕಲ್ಲುತನ
7. ಗಾಜಿಸಿ
8. ಇಂಗೋಪತಿ
9. ರೋದನ ಸಾಹಿತ್ಯ
10. ಉಪ–ನ್ಯಾಸಿಸಂ
11. ತಿಂಗಳೂರು
12. ವಿಚಿತ್ರದುರ್ಗ
13. ಕೊಬ್ಬಳ್ಳಿ
14. ಅಪರೋಪಕಾರಿಗಳು
15. ಕಪೋತಿಗಳ ಕಿರಲಾಟ

ಹೀಗೆ ಕಸ್ತೂರಿಯವರು ಕಾದಂಬರಿಯುದ್ದಕ್ಕೂ ಶಬ್ಧ ಚಮತ್ಕಾರದ ಜೊತೆ ವ್ಯಂಗ್ಯ ಶಕ್ತಿಯೂ ಕೆಲಸ ಮಾಡಿರುವುದನ್ನು ಗಮನಿಸಬಹುದಾಗಿದೆ. ಅವರ ಪದ ಸಂಪತ್ತು ಅದ್ಭುತವಾದದ್ದು ಶಿಷ್ಟ, ಗ್ರಾಮ್ಯ, ಆಡು ಮಾತು, ಕಾವ್ಯಮಯ ಮಾತು, ನುಡಿಗಟ್ಟು, ಗಾದೆಗಳು–ಎಲ್ಲ ಅವರ ಶಬ್ಧ ಭಂಡಾರದಿಂದ ಬಂದವು.

ಕರ್ನಾಟಕಕ್ಕೆ ಕರ್ನಾಟಕ ಎಂದು ಹೆಸರು ಇಡಬೇಕೋ ಅಥವಾ ಕರ್ಣಾಟಕ ಎಂದು ಹೆಸರು ಇಡಬೇಕೋ ಎಂಬ ಜಗಳ ಉಲ್ಲೇಖ ಮಾಡುತ್ತಾರೆ. ಕಸ್ತೂರಿ ಸೃಷ್ಟಿಸಿದ ಒಂದು ಜಾಹೀರಾತು ಈ ರೀತಿ ಇದೆ.

> "ಸತ್ತ ಮೇಲೆ ನಿಮಗೆ ಎಳ್ಳು ನೀರು ಬೇಡವೆ?
> ಹಾಗಾದರೆ ಕೂಡಲೇ ನಮ್ಮಲ್ಲಿ ವಿಮೆ ಮಾಡಿ ಸಾಯಿರಿ
> ಎಳ್ಳಿನ ಬೆಲೆ ಏರುವ ಸಂಭವವಿದೆ

ಆದ್ದರಿಂದ ನಮ್ಮಲ್ಲಿ ಪ್ರೀಮಿಯಂ ಹೆಚ್ಚಿದ್ದರೂ, ನಿಮಗೆ ಮೋಸವಿಲ್ಲ."

ಹೀಗೆ ಜಾಹೀರಾತುಗಳ ಕೃತಿಮ ಮೋಸಗಳ ಬಗ್ಗೆ ನಗೆ ಬುಗ್ಗೆ ಚಿಮ್ಮಿಸುತ್ತಾರೆ.

ಹಸಿರು ಶಾಲಿ ಅಯ್ಯಂಗಾರ್, ಕುಟುಂವದಾನಿ, ವಿಮಾ ಏಜೆಂಟ್‌ರು ಜನರನ್ನು ಮರುಳು ಮಾಡಿ ಮೋಸ ಮಾಡುವುದು. ಇಂತಹ ನಯವಂಚಕರು ನಗರಗಳಲ್ಲಿ ತಮ್ಮ ಬದುಕಿಗಾಗಿ ಕೃತ್ರಿಮ ಮೋಸಗಳನ್ನು ಮೋಸ ಮಾಡುತ್ತಾರೆ. ಗೋಮುಖ ವ್ಯಾಘ್ರರು, ಆಷಾಢಭೂತಿಗಳ ವಂಚನೆ 'ಗಾಳಿಗೋಪುರದಲ್ಲಿ' ಕಸ್ತೂರಿಯವರ ವಿಡಂಬನೆಗೆ, ಕುಚೋದ್ಯ ಲೇವಡಿಗೆ ಒಳಗಾಗಿದೆ.

ಇಸ್ಪೀಟಿನ ಬಂಗಲೆಯನ್ನು ಊದಿ ನೋಡಬಾರದು ಗಾಳಿಗೋಪುರದಲ್ಲಿ ಅಲ್ಲಲ್ಲುಳಿದ ಬಿರುಕುಗಳು ಗಾಳಿಯ ಸಂಚಾರಕ್ಕಾಗಿ ಇಡಲಾದ ಕಿಂಡಿಗಳಂತೆ ಭಾಸವಾಗುತ್ತದೆ. ಕತೆ ಹಠಾತ್ತಾಗಿ ಮುಗಿದಂತೆ ತೋರುತ್ತದೆ. "ಇಷ್ಟಾದರೂ ಕಾದಂಬರಿ ಹಲವಾರು ಹಾಸ್ಯ ಲೇಖನಗಳನ್ನು ಹೆಣೆದಂತಿದೆ. ಪಾತ್ರ ಸಂಯೋಜನೆ ಹಾಗೂ ಸನ್ನಿವೇಶಗಳಲ್ಲಿ ಅಗತ್ಯವಾದ ಸಾವಯವ ಸಂಬಂಧ ಗಟ್ಟಿಯಾಗಿ ಕಂಡುಬರುವುದಿಲ್ಲ. ಬಿಡಿ ಬಿಡಿಯಾಗಿ ಓದಿ ಸಂತೋಷಪಡಬೇಕಾಗುತ್ತದೆ."[1] ಕಾರಣ ಕಸ್ತೂರಿಯವರ ಮೊದಲ ಕಾದಂಬರಿ. ಆದರೂ ಅವರು ಹರಟೆ, ಪ್ರಬಂಧಗಳನ್ನು, ನಾಟಕಗಳನ್ನು ತುಂಬಾ ಬರೆಯುತ್ತಿದ್ದರ ಪ್ರತಿಫಲವಾಗಿ 'ಗಾಳಿಗೋಪುರ' ಕಾದಂಬರಿಯಲ್ಲೂ ಅದೇ ಗುಂಗಿನಲ್ಲಿದಂತೆ ತೋರುತ್ತದೆ.

ಒಂದು ಕೌಟುಂಬಿಕ ಸಣ್ಣ ಕತೆಯು ಲಲಿತ ಹಾಸ್ಯಕ್ಕೆ ಈಡಾಗುವಷ್ಟು ಸ್ವಾರಸ್ಯಪೂರ್ಣವಾಗಿದೆ. ಆದರೆ ಅದಕ್ಕೆ ನೂರು ಮಸಾಲೆಗಳನ್ನು ಹಾಕಿ ಕಸ್ತೂರಿಯವರು ಅದನ್ನು ಕಾದಂಬರಿಯ ಗಾತ್ರಕ್ಕೆ ಉಬ್ಬಿಸಿದ್ದಾರೆ. ವಾರ್ಡನ್‌ರು, ವನಿತಾಸೇವಾಸದನದ ಎಗ್ಗಮ್ಮ, ಶನಿಕಾಟದ ಸುಭಾಷಿತಪ್ರಿಯ, ವಿಮಾ ಏಜಂಟರು, ಸರ್ಕಸಿನ ಪ್ರೊಫೆಸರ್ ಪಶುಪತಿ, ಹೋಟೆಲಿನ ಕುಂಟಾವಧಾನಿಗಳು, ಬ್ಯಾಂಕ್ ಮ್ಯಾನೇಜರ ಗೋಳಪ್ಪನವರು ಕುಂಭಕೋಣಕ್ಕೆ ಯಾತ್ರೆ ಬೆಳೆಸಿದ 'ಬಿಸಿಬಿಸಿ' ಬಾತ್ಮಿದಾರ್ ಪೂರ್ಣ ಭೋದರಾಯರು, ಪೋಲಿಸ್ ನಂ. 361, ಬೀದಿಯ ಬೈರಾಗಿ ಮಹಾತ್ಮರು, ಹಸಿರು ಶಾಲಿನ ವರದಯ್ಯಂಗಾರರು, ಸುಬ್ಬಾಶಾಸ್ತ್ರಿಗಳ ಪುತ್ರ ಯಜ್ಞೇಶು, ಮತ್ತು ನಂಜುಂಡ ಶಾಸ್ತ್ರಿಗಳು. ಇವರೆಲ್ಲರನ್ನು ಲೇಖಕರು ತಮ್ಮ ಕಥಾನಾಯಕನ ಸುತ್ತಸುತ್ತುವ ಪಾತ್ರಗಳು. ಹಾಸ್ಯೋದ್ದೀಪಕವಾದ ಶಬ್ದ ವೈಪರೀತ್ಯ, ವಾಸ್ಯವೈಪರೀತ್ಯ, ಅರ್ಥವೈಪರೀತ್ಯಗಳು–ಇವೇ ಮೊದಲಾದವುಗಳಿಂದ, ಡೊಂಕಿನ ಶೃಂಗಾರದಿಂದಲೇ ರಚಿಸಿದ ಗೋಪುರಗಳಂತೆ, ಕೊಂಕುಕೊಂಕಾದ ಹೊಸ ನುಡಿಗಳಿಂದ ಕಟ್ಟಿದ ಕಾದಂಬರಿಯಾಗಿದೆ. ಮುಖ್ಯ ಕೇಂದ್ರ ಪಾತ್ರವಾದ ಹನುಮಂತರಾಯ ಡಿಗ್ರಿಯಿಂದ ದೊಡ್ಡವನಾಗಲಾರದೆ ಸರ್ಕಸಿನಲ್ಲಿ ಕರಡಿಯಾಗಿ ಕುಣಿದು, ಕತ್ತೆಯಂತೆ ಕಿರಚಿ, ಆ್ಯಂಗ್ಲೋ ಇಂಡಿಯನ್ ಹುಡುಗಿಯನ್ನು ಮದುವೆಯಾದನು ಎಂಬೊಂದೇ ಅಘಟಿತ ಘಟನೆಯು ಇಲ್ಲಿಯ ವಕ್ರಹಾಸ್ಯದ ವ್ಯಂಗ್ಯ ಸರಣಿಯನ್ನು ಸಾರಲು ಸಾಕಾಗಿದೆ. ಆದರೆ ಪರಿಕರ ರೂಪವಾಗಿ ಬಂದ ಹಾಸ್ಯವು ಸಹಜರಮ್ಯವಾಗಿದೆ. ಕಸ್ತೂರಿಯವರ ಭಾಷಾ ವೈಖರಿ ವಿಸ್ಮಯಕರವಾದುದು. ಶೈಲಿ ಅಸಾದೃಶವಾದುದು ಅವರು ಕನ್ನಡದ ಶಬ್ದಗಳೊಂದಿಗೆ ಆಟವಾಡುತ್ತಿದ್ದರು. ನಿರರ್ಗಳವಾಗಿ ಹರಿಯುವ ತುಂಬು ಪ್ರವಾಹದಂತೆ ಅವರ ಭಾಷೆ ಸಮೃದ್ಧವಾಗಿದೆ. ಶ್ಲೇಷೆ, ಪ್ರಾಸ, ಅನುಪ್ರಾಸ, ಪದಗಳ ಚಮತ್ಕಾರ, ಕುಣಿತ, ಒಮ್ಮೆ ಸರಳವಾಗಿ ಒಮ್ಮೆ ಆಡಂಬರವಾಗಿ ಸಂದರ್ಭಕ್ಕೆ ತಕ್ಕ ಗತಿಯಲ್ಲಿ ನಡೆಯುವ, ಓಡುವ ಅವರ ಕನ್ನಡ ಭಾಷೆ ಚಕಿತಗೊಳಿಸುತ್ತದೆ. ಕನ್ನಡ ಸಾಹಿತ್ಯದಲ್ಲಿ ವಿಡಂಬನಾತ್ಮಕ ಕಾದಂಬರಿಗಳು ಕಡಿಮೆ ಬೀಚಿ ಹಾಗೂ ಕಸ್ತೂರಿಯವರೇ ಪ್ರಮುಖರು. ಕಸ್ತೂರಿಯವರ ವಿನೋದ ಸಾಹಿತ್ಯವು ಸಿಟ್ಟನ್ನು ಮೈಗೂಡಿಸಿಕೊಂಡು ಹೊರಹೊಮ್ಮಿದೆ, ಪ್ರತಿಭಟನೆಯ ಧ್ವನಿಯನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿರುತ್ತದೆ. ಹಾಸ್ಯದ ಹೊದಿಕೆಯಲ್ಲಿ ಸತ್ಯದರ್ಶನ ಮಾಡಿದ್ದಾರೆ.

**ಆಧಾರ ಗ್ರಂಥಗಳು**


1. ಬೆಸ್ಟ್ ಆಫ್ ಪ್ರಭುಶಂಕರ – ಸಂ : ಬೇಲೂರು ರಾಮಮೂರ್ತಿ, ಅಂಕಿತ ಪ್ರಕಾಶನ, ಬಸವನಗುಡಿ, ಬೆಂಗಳೂರು–2011.
2. ಬೆಸ್ಟ್ ಆಫ್ ಕಸ್ತೂರಿ – ಸಂ : ವೈನ್. ಗುಂಡೂರಾವ್, ಅಂಕಿತ ಪ್ರಕಾಶನ, ಬಸವನಗುಡಿ, ಬೆಂಗಳೂರು, 2015.
3. ಗಾಳಿಗೋಪುರ – ನಾ.ಕಸ್ತೂರಿ, ಸಪ್ನ ಬುಕ್ ಹೌಸ್, ಬೆಂಗಳೂರು, 2013.
4. ಹಾಸ್ಯ – ಪ್ರೊ. ಎನ್.ವಿ. ರಂಗಣ್ಣ, ಪ್ರಸಾರಾಂಗ, ಮೈಸೂರು, 2007.
5. ನಗೆಗನ್ನಡಂಗೆಲ್ಗೆ – ಸಂ : ಎಚ್.ಕೆ. ನಂಜುಂಡಸ್ವಾಮಿ, ಅಭಿನವ ಪ್ರಕಾಶನ, ಬೆಂಗಳೂರು, 2007.

6. ನಾ.ಕಸ್ತೂರಿ – ಡಾ.ಎ.ಎಸ್. ವೇಣುಗೋಪಾಲರಾವ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1990.
7. ಕಸ್ತೂರಿ ಶತಕಂ – ಸಂ : ಎನ್.ಬಿ. ಚಂದ್ರಮೋಹನ್, ಕೃಷ್ಣ ಪುಬ್ಬರಾವ್, ಕ್ಯಾನ್ವಾಸ್ ಕ್ರಿಯೇಟಿವ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, 1996.
8. ಕನ್ನಡದಲ್ಲಿ ವಿನೋದ ಸಾಹಿತ್ಯ : ಸಂ : ಎಚ್.ಎಲ್. ಕೇಶವಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1989.